

بسم اللهِ الرّحمٰن الرّحيم

# ತವಕ್ಕುಲ್ ಅಲಲ್ಲಾಹ್ ಕುರಿತು ಹಝ್ರ‍ತ್ ಮಸೀಹ್ ಮೌಊದ್(ಅ)ರ ಪವಿತ್ರ ಮಾದರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**(ಅಯ್ಯದಹುಲ್ಲಾಹ್), ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09–10–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರ‍ತ್ ಮಸೀಹ್ ಮೌಊದ್(ಅ)ರ ತವಕ್ಕುಲ್‌ನ ಘಟನೆಗಳನ್ನು ವಿವರಿಸುತ್ತಾ ಹಝ್ರ‍ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್(ರ) ಹೀಗೆ ಹೇಳಿದರು: ಚಿಕಿತ್ಸೆಯ ವಿಷಯದಲ್ಲಿ ಹಝ್ರ‍ತ್ ಮಸೀಹ್ ಮೌಊದ್(ಅ)ರ ವಿಧಾನ ಹೇಗಿತ್ತೆಂದರೆ, ಎಂದಿಗೂ ಒಂದೇ ರೀತಿಯ ಚಿಕಿತ್ಸೆಯನ್ನು ಮಾಡುತ್ತಿರಲಿಲ್ಲ, ಬದಲಾಗಿ ಒಂದೇ ಕಾಯಿಲೆಗೆ ಅಲೋಪತಿ ಮತ್ತು ಯುನಾನಿ ಔಷಧಿಯನ್ನು ನೀಡುತ್ತಿದ್ದರು, ಯಾರಾದರೂ ಉಪಯುಕ್ತವಾದ ಮಾತನ್ನು ಹೇಳಿದರೆ ಅದನ್ನೂ ಅನುಸರಿಸುತ್ತಿದ್ದರು. ಯಾರಿಗಾದರೂ ಕನಸಿನಲ್ಲಿ ಏನಾದರೂ ಅರಿವಾಗಿದ್ದರೆ, ಕೆಲವು ಬಾರಿ ಅದನ್ನೂ ಪಾಲಿಸುತ್ತಿದ್ದರು. ಜೊತೆಗೆ ದುಆ ಮಾಡುತ್ತಿದ್ದರು. ಒಂದೇ ಸಮಯದಲ್ಲಿ ಡಾಕ್ಟರ್‌ಗಳು ಹಾಗೂ ಹಕೀಮ್‌ಗಳಿಂದ ಸಲಹೆ ಪಡೆಯುತ್ತಿದ್ದರು. ವೈದ್ಯಕೀಯ ಪುಸ್ತಕಗಳನ್ನು ನೋಡಿಯೂ ಚಿಕಿತ್ಸೆಯಲ್ಲಿ ಸಹಾಯ ಪಡೆಯುತ್ತಿದ್ದರು. ಒಟ್ಟಿನಲ್ಲಿ ಚಿಕಿತ್ಸೆಯನ್ನೇ ಒಂದು ಸಂಯುಕ್ತ ಮಿಶ್ರಣ ಮಾಡುತ್ತಿದ್ದರು. ಅವರ ನೈಜ ಭರವಸೆ ಅಲ್ಲಾಹನ ಮೇಲಿರುತ್ತಿತ್ತು.

ಪ್ರವಾದಿಗಳು ಮತ್ತು ಸಾಮಾನ್ಯ ಮನುಷ್ಯರ ಆತಂಕದ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತಾ ಹಝ್ರ‍ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮನುಷ್ಯನಿಗೆ ಮಾನವ ಸಹಜ ಗುಣದ ಕಾರಣದಿಂದ ಆತಂಕ ಉಂಟಾಗುವುದಾದರೂ, ಅದು ಮಾನುಷಿಕ ಲಕ್ಷಣವಾಗಿದೆ ಮತ್ತು ಎಲ್ಲ ಪ್ರವಾದಿಗಳು ಇದರಲ್ಲಿ ಪಾಲುದಾರರಾಗಿದ್ದಾರೆ. ಬದ್ರ್ ಯುದ್ಧದಲ್ಲಿ ನಬಿ(ಸ)ರಿಗೂ ಆತಂಕ ಉಂಟಾಗಿತ್ತು. ಆದರೆ ಸಾಮಾನ್ಯ ಜನರು ಮತ್ತು ಪ್ರವಾದಿಗಳಲ್ಲಿ ಇರುವ ವ್ಯತ್ಯಾಸವೇನೆಂದರೆ, ಸಾಮಾನ್ಯ ಜನರಂತೆ ಪ್ರವಾದಿಗಳ ಆತಂಕದಲ್ಲಿ ಎಂದಿಗೂ ನಿರಾಶೆ ಇರುವುದಿಲ್ಲ. ದೇವನು ತಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ಎಂಬ ದೃಢವಿಶ್ವಾಸ ಅವರಿಗೆ ಇರುತ್ತದೆ.

ಹಝ್ರ‍ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನನ್ನ ಸ್ವಂತ ಸ್ಥಿತಿ ಹೇಗಿದೆಯೆಂದರೆ, ನನ್ನನ್ನು ಉರಿಯುವ ಬೆಂಕಿಗೆ ಹಾಕಿದರೆ ಕೂಡ, ಯಾವುದೇ ಹಾನಿ ಆಗದು ಎಂದು ನಾನು ನಂಬುತ್ತೇನೆ. ಬೆಂಕಿಯಿಂದ ಮನುಷ್ಯನು ಸುಟ್ಟುಹೋಗುತ್ತಾನೆ, ಆದ್ದರಿಂದ ಅದರ ಆತಂಕವಂತೂ ಇರುತ್ತದೆ. ಆದರೆ ಆ ಕ್ಷಣವೇ, 'ಹೇ ಬೆಂಕಿಯೇ, ನೀನು ಇಬ್ರಾಹೀಮ್‌ಗಾಗಿ ತಂಪಾಗು ಮತ್ತು ಅವರಿಗಾಗಿ ಶಾಂತಿಯ ಮೂಲವಾಗು' ಎಂಬ ಧ್ವನಿ ಕೇಳಿಬರುವುದು ಎಂಬ ನಿರೀಕ್ಷೆ ಇರುತ್ತದೆ. ಆದರೆ ಈಮಾನ್ ಇಲ್ಲದ ಇತರರ ಆತಂಕದಲ್ಲಿ ನಿರಾಶೆ ಇರುತ್ತದೆ. ಅವರಿಗೆ ದೇವನ ಮೇಲೆ ನಿರೀಕ್ಷೆಯಿರುವುದಿಲ್ಲ. ಇದು ಸತ್ಯನಿಷೇಧವಾಗಿದೆ. ಈ ಸ್ಥಿತಿಯು ಕುಫ್ರ್ ಆಗಿದೆ. ಹಾಗಾಗಿ, ಆತಂಕದ ಸಮಯದಲ್ಲಿ ಅಲ್ಲಾಹನ ಮೇಲೆ ಭರವಸೆ ಇಡುವುದು ಪ್ರವಾದಿಗಳ ಲಕ್ಷಣವಾಗಿರುವಂತೆಯೇ, ಒಬ್ಬ ಸತ್ಯವಿಶ್ವಾಸಿಯೂ ಪ್ರವಾದಿಗಳ ಮತ್ತು ವಿಶೇಷವಾಗಿ ನಬಿ(ಸ)ರ ಮಾದರಿಯನ್ನು ಅನುಸರಿಸುತ್ತಾ ನಿರಾಶೆ ಮತ್ತು ಹತಾಶೆಯನ್ನು ತನ್ನ ಹತ್ತಿರ ಸುಳಿಯಲು ಬಿಡಬಾರದು. ಆತಂಕದಲ್ಲೂ ಅಲ್ಲಾಹನ ಮೇಲೆ ತವಕ್ಕುಲ್ ಇರಬೇಕು. ಸಾಧನಗಳ ಬಳಕೆ ಇರಬೇಕು. ದುಆಗಳಿಗೆ ಒತ್ತು ನೀಡಬೇಕು. ಅನಂತರ ಅಲ್ಲಾಹನ ಮೇಲೆ ತವಕ್ಕುಲ್ ಇರಿಸಬೇಕು.

ಹಝ್ರ‍ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಮುನ್‌ಶಿ ಜ಼ಫರ್ ಅಹ್ಮದ್ ಸಾಹಿಬ್ ಕಪೂರ್‌ಥಲವಿ(ರ) ವಿವರಿಸುತ್ತಾರೆ; ಜಲ್ಸ ಸಾಲಾನಾದ ಸಂದರ್ಭದಲ್ಲಿ ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಹಝ್ರ‍ತ್ ಮಸೀಹ್ ಮೌಊದ್(ಅ) ಅತಿಥಿಗಳಿಗಾಗಿ ತಮ್ಮ ಪತ್ನಿಯ ಆಭರಣಗಳನ್ನು ಮಾರಾಟ ಮಾಡಿ ಅಥವಾ ಅಡವಿಟ್ಟು ಖರ್ಚಿನ ವ್ಯವಸ್ಥೆ ಮಾಡಿದರು. ಎರಡು ದಿನಗಳ ನಂತರ ಮತ್ತೆ ಖರ್ಚಿನ ಬಗ್ಗೆ ಚಿಂತೆ ಶುರುವಾದಾಗ ಹಝ್ರ‍ತ್ ಮಸೀಹ್ ಮೌಊದ್(ಅ) ಹೇಳಿದರು: 'ಯಾರ ಅತಿಥಿಗಳಾಗಿದ್ದಾರೋ ಅವನೇ (ಅಲ್ಲಾಹನೇ) ಸ್ವತಃ ವ್ಯವಸ್ಥೆ ಮಾಡುವನು'

ಮರುದಿನ ಬೆಳಿಗ್ಗೆ ವಿವಿಧ ಸ್ಥಳಗಳಿಂದ ಐವತ್ತು ಮತ್ತು ನೂರು ರೂಪಾಯಿಗಳ ಅನೇಕ ಮನಿ ಆರ್ಡರ್‌ಗಳು ಬಂದವು. ಅಲ್ಲಾಹನ ಮೇಲೆ ಸಂಪೂರ್ಣ ತವಕ್ಕುಲ್ ಇಡುವವರಿಗೆ ಅಗತ್ಯದ ಸಮಯದಲ್ಲಿ ಅವನ ಕಡೆಯಿಂದ ಅದೃಶ್ಯ ಸಹಾಯ ಲಭಿಸುತ್ತದೆ ಎಂಬ ಪಾಠವನ್ನು ಈ ಘಟನೆ ನೀಡುತ್ತದೆ.

ಹಝ್ರ‌ತ್ ಖಲೀಫತುಲ್ ಮಸೀಹ್ ಅವ್ವಲ್(ರ) ವಿವರಿಸುತ್ತಾರೆ: ಹಝ್ರ‌ತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಿದ್ದರು: "ಕೆಲವರಿಗೆ 'ನನ್ನ ಬಳಿ ಸಂಪತ್ತಿದೆ' ಎಂಬ ಸಂತೋಷವಿರುತ್ತದೆ, ಕೆಲವರಿಗೆ 'ನನಗೆ ಮಕ್ಕಳಿದ್ದಾರೆ' ಎಂಬ ಸಂತೋಷವಿರುತ್ತದೆ. ಇನ್ನು ಕೆಲವರಿಗೆ 'ನನ್ನ ಬಳಿ ಜನರ ದೊಡ್ಡ ಗುಂಪಿದೆ' ಎಂಬ ಸಂತೋಷವಿರುತ್ತದೆ. ಆದರೆ, 'ನನ್ನ ದೇವನು ಸರ್ವಶಕ್ತನಾಗಿದ್ದಾನೆ' ಎಂದು ನಾನು ಸಂತೋಷಪಡುತ್ತೇನೆ."

ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೈಜ ಅನ್ನದಾತ ಅಲ್ಲಾಹನಾಗಿದ್ದಾನೆ. ಅವನ ಮೇಲೆ ಭರವಸೆ ಇಡುವ ವ್ಯಕ್ತಿಯು ಎಂದಿಗೂ ರಿಝ್ಖ್‌ನಿಂದ ವಂಚಿತನಾಗಲಾರ. ತನ್ನ ಮೇಲೆ ತವಕ್ಕುಲ್ ಇಡುವ ವ್ಯಕ್ತಿಗೆ ಅವನು ಪ್ರತಿಯೊಂದು ರೀತಿಯಲ್ಲೂ ಮತ್ತು ಪ್ರತಿಯೊಂದು ಕಡೆಯಿಂದಲೂ ಜೀವನಾಧಾರದ ವಸ್ತುಗಳನ್ನು ತಲುಪಿಸುತ್ತಾನೆ. ಯಾರು ನನ್ನ ಮೇಲೆ ಭರವಸೆ ಇಡುತ್ತಾನೋ ಮತ್ತು ತವಕ್ಕುಲ್ ಮಾಡುತ್ತಾನೋ, ಅವನಿಗಾಗಿ ನಾನು ಆಕಾಶದಿಂದ ಸುರಿಸುವೆನು ಮತ್ತು ಪಾದಗಳಡಿಯಿಂದ ಹೊರತೆಗೆಯುವೆನು ಎಂದು ಅಲ್ಲಾಹನು ಹೇಳುತ್ತಾನೆ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ಅಲ್ಲಾಹನ ಮೇಲೆ ಭರವಸೆ ಇಡಬೇಕು.

ಹಝ್ರ‌ತ್ ಶೇಖ್ ಯಅ್‌ಖೂಬ್ ಅಲಿ ಸಾಹಿಬ್ ಇರ್ಫಾನಿ(ರ) ವರದಿ ಮಾಡುತ್ತಾರೆ: ಹಝ್ರ‌ತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್(ರ)ರ ಬಾಲ್ಯದಲ್ಲಿ ಹಝ್ರ‌ತ್ ಮಸೀಹ್ ಮೌಊದ್(ಅ) ವಿಶ್ವಾಸವರ್ಧಕ ಕಥೆಯೊಂದನ್ನು ಹೇಳಿದರು. ಓರ್ವ ಪುಣ್ಯಾತ್ಮರ ಉಪದೇಶದ ಮೇರೆಗೆ ಕಳ್ಳನೊಬ್ಬ ಕಳ್ಳತನವನ್ನು ಬಿಟ್ಟು ಅಲ್ಲಾಹನ ಮೇಲೆ ತವಕ್ಕುಲ್ ಮತ್ತು ತಖ್ವ ಅಳವಡಿಸಿಕೊಂಡಾಗ, ಅವನ ಅಗತ್ಯಗಳು ಅದೃಶ್ಯ ರೀತಿಯಲ್ಲಿ ಪೂರೈಸಲ್ಪಡಲು ಆರಂಭಿಸಿದವು. ಖುರ್‌ಆನ್‌ನ ಆಯತ್‌ಗಳು ಅವನ ಹೃದಯದಲ್ಲಿ ದೇವನ ಮಹಿಮೆ ಮತ್ತು ದೈವಿಕ ಅರಿವನ್ನು ಎಷ್ಟರಮಟ್ಟಿಗೆ ಹೆಚ್ಚಿಸಿದವೆಂದರೆ ಅವನು ದೇವಪ್ರೇಮದಲ್ಲಿ ತಡಕಾಡಲು ಆರಂಭಿಸಿದನು. ನೈಜ ತವಕ್ಕುಲ್ ಮತ್ತು ತಖ್ವವು ಮನುಷ್ಯನನ್ನು ದೇವನ ಸಾಮೀಪ್ಯ ಮತ್ತು ದೈವಿಕ ಅರಿವಿನ ಎಂತಹ ಸ್ಥಾನಕ್ಕೆ ತಲುಪಿಸುತ್ತದೆ ಎಂದರೆ, ಅಲ್ಲಿ ಲೌಕಿಕ ಅಗತ್ಯಗಳು ಕೂಡ ಅಲ್ಲಾಹನ ಕೃಪೆಯಿಂದ ಪೂರೈಸಲ್ಪಡುತ್ತವೆ ಎಂಬ ಪಾಠವನ್ನು ಈ ಕಥೆ ನೀಡುತ್ತದೆ.

ಹುಝೂರ್ ಹೇಳುತ್ತಾರೆ: ಸಣ್ಣ ಮಕ್ಕಳಿಗೆ ಆಳವಾದ ವಿಷಯಗಳು ಅರ್ಥವಾಗುವುದಿಲ್ಲ ಎಂದು ಜನರು ಸಾಮಾನ್ಯವಾಗಿ ಹೇಳುತ್ತಾರೆ, ಆದರೆ ಹಝ್ರ‌ತ್ ಮಸೀಹ್ ಮೌಊದ್(ಅ) ಹಝ್ರ‌ತ್ ಮುಸ್ಲಿಹ್ ಮೌಊದ್(ರ)ರಿಗೆ ಕೇವಲ ಒಂಬತ್ತು ವರ್ಷ ಪ್ರಾಯವಿದ್ದಾಗ ಈ ಕಥೆಯನ್ನು ಹೇಳಿದರು. ಖಂಡಿತವಾಗಿಯೂ ಹಝ್ರ‌ತ್ ಮಸೀಹ್ ಮೌಊದ್(ಅ) ಹಝ್ರ‌ತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್‌ರ ಬುದ್ಧಿವಂತಿಕೆಗೆ ತಕ್ಕಂತೆಯೂ ಈ ಕಥೆಯನ್ನು ಹೇಳಿರಬಹುದು, 'ಮಗುವಿಗೆ ಅರ್ಥವಾಗುವುದು' ಎಂದು ಹಝ್ರ‌ತ್ ಮಸೀಹ್ ಮೌಊದ್(ಅ)ರಿಗೆ ತಿಳಿದಿರಬೇಕು, ಆದರೆ 'ಬಾಲ್ಯದಿಂದಲೇ ಮಕ್ಕಳಲ್ಲಿ ತವಕ್ಕುಲ್‌ನ ಪ್ರಾಮುಖ್ಯತೆಯನ್ನು ಮೂಡಿಸಬೇಕು' ಎಂಬ ಉದ್ದೇಶವೂ ಅವರ ಮುಂದಿರಬಹುದು. ಹಾಗಾಗಿ ತರಬೇತಿಯ ಈ ತತ್ವಗಳು ನಮ್ಮೆಲ್ಲರಿಗೂ ಮಾರ್ಗದರ್ಶಕವಾಗಿವೆ.

ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು: "ನನ್ನ ದೃಷ್ಟಿಯಲ್ಲಿ ಅತ್ಯಂತ ದೊಡ್ಡ ಮುಶ್ರಿಕ್ ಎಂದರೆ ನಕಲಿ ರಸವಾದಿಗಳು. ಇವರು ಅನ್ನದ ಹುಡುಕಾಟದಲ್ಲಿ ಅಲೆಯುತ್ತಿರುತ್ತಾರೆ ಮತ್ತು ಸಂಪಾದನೆಗಾಗಿ ಅಲ್ಲಾಹನು ನ್ಯಾಯಸಮ್ಮತ ರೀತಿಯಲ್ಲಿ ನಿಗದಿಪಡಿಸಿರುವ ಸಾಧನಗಳನ್ನು ಬಳಸುವುದಿಲ್ಲ. ತಖ್ವವು ಎಂತಹ ಸಂಗತಿಯೆಂದರೆ, ಅದನ್ನು ಪಡೆದವನಿಗೆ ಇಡೀ ಲೋಕದ ಅನುಗ್ರಹಗಳೇ ಸಿಕ್ಕಿದಂತಾಗುವುದು. ನೆನಪಿಡಿ! ದೇವಭಯವುಳ್ಳವನು ಎಂದಿಗೂ ಯಾರ ಮುಲಾಜಿನಲ್ಲೂ ಇರುವುದಿಲ್ಲ, ಬದಲಾಗಿ ಆತ ಎಂತಹ ಸ್ಥಾನದಲ್ಲಿರುತ್ತಾನೆಂದರೆ, ಆತ ಬಯಸಿದ್ದನ್ನು ಆತ ಬೇಡುವ ಮುನ್ನವೇ ಅಲ್ಲಾಹನು ಒದಗಿಸುತ್ತಾನೆ." ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನಾನು ಒಂದು ದರ್ಶನದಲ್ಲಿ ಅಲ್ಲಾಹನನ್ನು ನೋಡಿದೆ; ಅವನು ನನ್ನ ಹೆಗಲಿಗೆ ಕೈಹಾಕಿ, **'ಜೇ ತೂ ಮೇರಾ ಹೋ ರಹೇನ್, ಸಬ್ ಜಗ್ ತೇರಾ ಹೋ'** (ನೀನು ನನ್ನವನಾಗಿದ್ದರೆ, ಇಡೀ ಜಗತ್ತು ನಿನ್ನದಾಗುವುದು) ಎಂದು ಹೇಳಿದನು." ಹಾಗಾಗಿ ಇದು ಎಲ್ಲ ಪ್ರವಾದಿಗಳು, ಪುಣ್ಯಾತ್ಮರು ಮತ್ತು ಸಜ್ಜನರು ಪರೀಕ್ಷಿಸಿರುವ ಉಪಾಯವಾಗಿದೆ.

ಹುಝೂರ್ ಹೇಳುತ್ತಾರೆ: ಪಾದ್ರಿ ಅಬ್ದುಲ್ಲಾ ಆಥಮ್ ಕುರಿತು ಹದಿನೈದು ತಿಂಗಳುಗಳಲ್ಲಿ ನಾಶವಾಗುವ ಭವಿಷ್ಯವಾಣಿಯಿತ್ತು. ಹದಿನೈದು ತಿಂಗಳ ಗಡುವು ಮುಗಿಯುತ್ತಿದ್ದಾಗ, ಕೆಲವರು ಬಿಕ್ಕಿ ಬಿಕ್ಕಿ ಅಳುತ್ತಾ 'ಆಥಮ್ ಸಾಯಲಿ'

ಎಂದು ದುಆ ಮಾಡುತ್ತಿದ್ದರು. ಆದರೆ ಹಝ್ರತ್ ಮಸೀಹ್ ಮೌಊದ್[ಅ] ಆ ಸಹೋದರರ ಈ ಕೃತ್ಯವನ್ನು ಇಷ್ಟಪಡಲಿಲ್ಲ ಮತ್ತು ಹೀಗೆ ಕೇಳಿದರು: "ದೇವನಿಗಿಂತ ಹೆಚ್ಚಾಗಿ ಅವನು ಸ್ವತಃ ಹೇಳಿದ ಮಾತಿನ ಗೌರವದ ಬಗ್ಗೆ ಬೇರೆ ಯಾರಿಗಾದರೂ ಹೆಚ್ಚು ಕಾಳಜಿ ಇರಲು ಸಾಧ್ಯವೇ? ದೇವನು 'ಹೀಗಾಗುವುದು' ಎಂದು ಹೇಳಿದರೆ, ಅದು ಖಂಡಿತವಾಗಿಯೂ ಸಂಭವಿಸುವುದು ಎಂಬ ನಂಬಿಕೆ ನಮಗಿರಬೇಕು... ನಾವು ಓರ್ವ ವ್ಯಕ್ತಿಯನ್ನು ಸತ್ಯವಂತನೆಂದು ಒಪ್ಪಿಕೊಂಡ ಮೇಲೆ, ಅವನ ಮಾತುಗಳ ಮೇಲೆ ದೃಢವಿಶ್ವಾಸವಿಡುವುದಷ್ಟೇ ನಮ್ಮ ಕೆಲಸವಾಗಿದೆ."

ಅಬ್ದುಲ್ಲಾ ಆಥಮ್ ಜೊತೆಗಿನ ಚರ್ಚೆಯ ಸಂದರ್ಭದಲ್ಲಿ, ಒಂದು ಹಂತದಲ್ಲಿ ಕೆಲವು ಸಹೋದರರ ದೃಷ್ಟಿಯಲ್ಲಿ ಉತ್ತರಿಸಲು ಕಷ್ಟವೆನಿಸುವಂತಹ ಕೆಲವು ಪ್ರಶ್ನೆಗಳನ್ನು ಮುಂದಿಡಲಾಯಿತು. ಅವರ ತಿಳುವಳಿಕೆಯ ಪ್ರಕಾರ, ಅವುಗಳಿಗೆ ಉತ್ತರಿಸಲು ಸಮಾಲೋಚನೆ ನಡೆಸಬಹುದಿತ್ತು. ಇಂತಹ ಸ್ಥಿತಿಯಲ್ಲಿ ಉಪಯುಕ್ತ ಉಲ್ಲೇಖಗಳನ್ನು ಹುಡುಕಿ ಹಝ್ರತ್ ಮಸೀಹ್ ಮೌಊದ್[ಅ]ರ ಬಳಿ ಬಂದು ಅವರು ಹೀಗೆ ಹೇಳಿದರು: "ಹುಝೂರ್, ನಾಳೆಯ ಚರ್ಚೆಗಾಗಿ ಸಮಾಲೋಚನೆ ನಡೆಸಬಹುದಾಗಿದೆ". ಹಝ್ರತ್ ಮಸೀಹ್ ಮೌಊದ್(ಅ) ಮುಗುಳ್ನಕ್ಕು ಹೀಗೆ ಹೇಳಿದರು: "ನಿಮ್ಮ ದುಆ ಸಾಕು".

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[ರ] ಬರೆಯುತ್ತಾರೆ: ಪ್ರವಾದಿಗಳು ಹೆಚ್ಚಿನ ವಿಷಯಗಳಲ್ಲಿ ಸಮಾಲೋಚನೆ ನಡೆಸುತ್ತಾರೆ ಮತ್ತು ಅವರಿಗಿಂತ ಹೆಚ್ಚಾಗಿ ಯಾರೂ ಸಲಹೆ ಪಡೆಯುವುದಿಲ್ಲ, ಆದರೆ ಕೆಲವು ಸಮಯಗಳಿರುತ್ತವೆ, ಆಗ ಅವರು ಇತರ ಮಾಧ್ಯಮಗಳನ್ನು ಬಿಟ್ಟು ಕೇವಲ ದೇವನ ಸಹಾಯದ ಮೇಲೆ ಭರವಸೆ ಇಡುವುದನ್ನು ಇಷ್ಟಪಡುತ್ತಾರೆ.

**'ಆಯೀನಾ ಕಮಾಲಾತೇ ಇಸ್ಲಾಮ್'** ಕೃತಿಯ ಅರಬಿ ಭಾಗವನ್ನು ಬರೆಯುತ್ತಿದ್ದಾಗ, ಅದರ ಪರ್ಷಿಯನ್ ಅನುವಾದವನ್ನು ಮಾಡಲಿಕ್ಕಾಗಿ ಹಝ್ರತ್ ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಸಿಯಾಲ್ಕೋಟಿ[ರ]ರಿಗೆ ತಲುಪಿಸಲು ಒಂದು ದೊಡ್ಡ ಎರಡು-ಪುಟಗಳ ಬರವಣಿಗೆಯನ್ನು ಹಝ್ರತ್ ಮಸೀಹ್ ಮೌಊದ್[ಅ] ಹಝ್ರತ್ ಹಕೀಮ್ ಮೌಲ್ವಿ ನೂರುದ್ದೀನ್ ಸಾಹಿಬ್[ರ]ರಿಗೆ ನೀಡಿದರು. ಆ ಬರಹವು ಎಂತಹ ಭಾಷಣ ಶೈಲಿ ಮತ್ತು ವಾಕ್ಚಾತುರ್ಯವನ್ನು ಹೊಂದಿತ್ತೆಂದರೆ, ದೇವನು ಅತ್ಯಂತ ಉತ್ತಮವಾದ ವಿಷಯವನ್ನು ಸೂಚಿಸಿದ್ದಾನೆ ಎಂದು ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಅದರ ಬಗ್ಗೆ ಅಭಿಮಾನವಿತ್ತು. ಆದರೆ ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್[ರ]ರಿಂದ ಆ ಎರಡು ಪುಟಗಳು ಎಲ್ಲೋ ಕಳೆದುಹೋದವು. ಹಝ್ರತ್ ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಸಿಯಾಲ್ಕೋಟಿ[ರ] ಆ ಪುಟಗಳ ಬಗ್ಗೆ ಕೇಳಿದಾಗ, ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್(ರ)ರ ಮುಖ ಬಿಳಿಚಿಕೊಂಡಿತು. ಬಹಳಷ್ಟು ಹುಡುಕಲಾಯಿತು, ಆದರೆ ಅದು ಸಿಗಲಿಲ್ಲ. ಹಝ್ರತ್ ಮಸೀಹ್ ಮೌಊದ್[ಅ]ರಿಗೆ ವಿಷಯ ತಿಳಿದಾಗ, ಎಂದಿನಂತೆ ಅತ್ಯಂತ ಹಸನ್ಮುಖರಾಗಿ ಮುಗುಳ್ನಗುತ್ತಾ ಹೊರಬಂದರು. ಕೋಪಗೊಳ್ಳುವುದು ಅಥವಾ ಆತಂಕ ವ್ಯಕ್ತಪಡಿಸುವುದಕ್ಕೆ ಬದಲಾಗಿ, ಪ್ರತಿ ಕಳೆದುಹೋಗಿದ್ದರಿಂದ ಮೌಲ್ವಿ ಸಾಹಿಬ್‌ಗೆ ವಿನಾಕಾರಣ ಚಿಂತೆಯುಂಟಾಯಿತು ಎಂದು ತಾವೇ ಕ್ಷಮೆ ಯಾಚಿಸಲು ತೊಡಗಿದರು ಮತ್ತು ಹೀಗೆ ಹೇಳಿದರು: ಮೌಲ್ವಿ ಸಾಹಿಬ್‌ಗೆ ತೊಂದರೆಯಾಗಿದ್ದಕ್ಕೆ ನನಗೆ ಬಹಳ ಖೇದವಿದೆ. ದೇವನು ತನ್ನ ಕೃಪೆಯಿಂದ ಕಳೆದುಹೋದ ಕಾಗದಕ್ಕಿಂತಲೂ ಉತ್ತಮವಾದ ವಿಷಯವನ್ನು ಬರೆಯುವ ಸೌಭಾಗ್ಯ ದಯಪಾಲಿಸುವನು ಎಂಬ ನಂಬಿಕೆ ನನಗಿದೆ."

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಯಾರು ಫಕೀರನಂತೆ ಮತ್ತು ಸಂತೃಪ್ತಿಯಿಂದ ಇಸ್ಲಾಮಿನ ಸೇವೆ ಮಾಡುತ್ತಾನೋ, ಅವನು ಒಂದು ಪವಾಡ ಮತ್ತು ಚಿಹ್ನೆಯಾಗುತ್ತಾನೆ. ಯಾರು ಲೌಕಿಕ ಗುಂಪಿನೊಡನೆ ಮಾಡುತ್ತಾನೋ, ಅದರಲ್ಲಿ ಅನುಭೂತಿ ಇರುವುದಿಲ್ಲ, ಏಕೆಂದರೆ ಅದರಲ್ಲಿ 'ತವಕ್ಕುಲ್ ಅಲಲ್ಲಾಹ್'ದ ಸಂಪೂರ್ಣ ಆನಂದ ಇರುವುದಿಲ್ಲ. ತವಕ್ಕುಲ್‌ನೊಂದಿಗೆ ಕೆಲಸ ಮಾಡುವಾಗ, ಅಲ್ಲಾಹನು ಸಹಾಯ ಮಾಡುತ್ತಾನೆ. ಇಂತಹ ವಿಷಯಗಳು ಆಧ್ಯಾತ್ಮಿಕತೆಯಿಂದ ಉಂಟಾಗುತ್ತವೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ವಾಸ್ತವದಲ್ಲಿ 'ತವಕ್ಕುಲ್' ಎಂಬುದು ಎಂತಹ ಸಂಗತಿ ಎಂದರೆ, ಅದು ಮನುಷ್ಯನನ್ನು ಯಶಸ್ವಿ ಹಾಗೂ ಗುರಿ ಮುಟ್ಟುವವನನ್ನಾಗಿ ಮಾಡುತ್ತದೆ. ಯಾರು ಅಲ್ಲಾಹನ ಮೇಲೆ ತವಕ್ಕುಲ್ ಇಡುತ್ತಾನೋ, ಅಲ್ಲಾಹನೇ ಅವನಿಗೆ ಸಾಕು ಎಂದು ಆಗುತ್ತದೆ ಎಂಬುದಾಗಿ ಅಲ್ಲಾಹನು ಹೇಳುತ್ತಾನೆ; ಆದರೆ ಷರತ್ತೇನೆಂದರೆ, ಅವನು ಪ್ರಾಮಾಣಿಕ ಹೃದಯದಿಂದ ತವಕ್ಕುಲ್‌ನ ನೈಜ ಅರ್ಥವನ್ನು ತಿಳಿದು ಹೆಜ್ಜೆ ಇಡುವವನಾಗಿರಬೇಕು ಮತ್ತು ತಾಳ್ಮೆ ವಹಿಸುವವನಾಗಿ, ಸ್ಥಿರಚಿತ್ತತೆ ಉಳ್ಳವನಾಗಿರಬೇಕು. ಕಷ್ಟಗಳಿಗೆ ಹೆದರಿ ಹಿಂದೆ ಸರಿಯಬಾರದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮನುಷ್ಯನಿಗೆ ಧರ್ಮದ ಕುರಿತು ಚಿಂತೆಗಳು ಅಧಿಕವಾದರೆ ದೇವನು ಸ್ವತಃ ಅವನ ಲೌಕಿಕ ವ್ಯವಹಾರಗಳ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾನೆ. ಆದರೆ ಬೇಸರದ ಸಂಗತಿಯೆಂದರೆ, ಪ್ರತಿದಿನ ದೊಡ್ಡ ದೊಡ್ಡ ವಿಪತ್ತುಗಳು ಸಂಭವಿಸುತ್ತಿದ್ದರೂ, ಜನರು ಲೆಕ್ಕಿಸುವುದಿಲ್ಲ, ಗಮನಹರಿಸುವುದಿಲ್ಲ. ಮೂಸಾ(ಅ)ರ ಕಾಫಿರರೇ ಉತ್ತಮರಾಗಿದ್ದರು; ಏಕೆಂದರೆ ಅವರ ಮೇಲೆ ವಿಪತ್ತು ಬರುವಾಗ, ಅವರು ಗಮನಹರಿಸುತ್ತಿದ್ದರು ಮತ್ತು 'ಇದು ದೂರವಾದರೆ ನಾವು ನಂಬುತ್ತೇವೆ' ಎಂದು ಹೇಳುತ್ತಿದ್ದರು. ಆದರೆ ಇಂದಿನ ಕಾಫಿರರು ಅವರಿಗಿಂತಲೂ ಹೆಚ್ಚು ಕಠಿಣ ಹೃದಯಿಗಳಾಗಿದ್ದಾರೆ; ಪ್ರತಿದಿನ ಹೊಸ ಹೊಸ ವಿಪತ್ತುಗಳು ಬರುತ್ತಿವೆ, ಹೊಸ ಹೊಸ ರೂಪಗಳಲ್ಲಿ ದೇವನ ಕೋಪ ಇಳಿಯುತ್ತಿದೆ, ಆದರೆ ಅವರು ಕಿಂಚಿತ್ತೂ ಎಚ್ಚರವಾಗುವುದಿಲ್ಲ. ಕೊನೆಗಾಲದಲ್ಲಿ ವಿವಿಧ ರೀತಿಯ ವಿಪತ್ತುಗಳು ಬರುತ್ತವೆ; ಆ ಸಮಯದಲ್ಲಿ ಕೆಲವರು ಮಾರ್ಗದರ್ಶನ ಪಡೆಯುತ್ತಾರೆ ಮತ್ತು ಬಹುತೇಕರು ನಾಶವಾಗುತ್ತಾರೆ ಎಂಬುದು ದೇವನ ಪ್ರಾಚೀನ ವಾಗ್ದಾನವಾಗಿತ್ತು. ದೇವನಂತೂ ದೃಷ್ಟಾಂತವನ್ನು ತೋರಿಸುತ್ತಾನೆ, ಆದರೆ ಆ ದೃಷ್ಟಾಂತಗಳಿಂದ ಸತ್ಯವಿಶ್ವಾಸಿಗಳು ಮಾತ್ರ ಪ್ರಯೋಜನ ಪಡೆಯುತ್ತಾರೆ.

ಹುಝೂರ್ ಹೇಳಿದರು: ಅಲ್ಲಾಹನು ಈ ಲೌಕಿಕ ಜನರಿಗೆ ಅವನ ಕಡೆಗೆ ಮರಳುವ ಬುದ್ಧಿಯನ್ನು ನೀಡಲಿ; ಅವರು ತಮ್ಮ ಇಹಲೋಕ ಹಾಗೂ ಪರಲೋಕವನ್ನು ಉತ್ತಮಪಡಿಸಿಕೊಳ್ಳುವವರಾಗಲಿ. ಹಝ್ರತ್ ಮಸೀಹ್ ಮೌಊದ್(ಅ)ರನ್ನು ಸ್ವೀಕಾರ ಮಾಡಿಕೊಂಡಿರುವ ನಮ್ಮ ಈಮಾನ್ ಮತ್ತು ದೃಢವಿಶ್ವಾಸವನ್ನು ಅಲ್ಲಾಹನು ಹೆಚ್ಚಿಸಲಿ, ನಾವು ಪ್ರಾರ್ಥನೆಗಳೊಂದಿಗೆ ತವಕ್ಕುಲ್‌ನ ಅತ್ಯುನ್ನತ ಗುಣಮಟ್ಟವನ್ನು ಪಡೆಯುವವರಾಗಲಿ ಮತ್ತು ಅದರಲ್ಲಿ ಪ್ರಗತಿ ಹೊಂದುವವರು ಸಹ ಆಗಲಿ.

————————****————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔

***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak',*** *Islamabad, Tilford,* U.K. On 09-10-2026
**Summarized by** *Majlis Ansarullah Bharat*
***Kannada Translation:*** Moulavi Inamullah for Kannada Desk, Qadian
***Reviewed by:*** M.P Ibrahim | ***Layout:*** Basheer K.P. Manjeshwar
***Published By:*** Kannada Isha'at Team for Nazarath Nashr-O-Isha'ath, Qadian
***Email:*** *khutuba.kannada@gmail.com*
**You can find all the Sermons archived at**: www.alislam.org/friday-sermon